# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 219(210) |
| ಸದಸ್ಯರ ಹೆಸರು | : | ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 06.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಉಪಮುಖ್ಯಮಂತ್ರಿಗಳು |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದ ವಿವಿಧ ನೀರಾವರಿ ಜಲಾಶಯ/ ಅಣೆಕಟ್ಟು ಸ್ಥಳಗಳಲ್ಲಿ ಉದ್ಯಾನ/ ಉಪವನಗಳ ಅಭಿವೃದ್ಧಿಪಡಿಸಲು ಸರ್ಕಾರ ಯೋಜನೆ ರೂಪಿಸಿದೆಯೇ; | ಜಲಸಂಪನ್ಮೂಲ ಇಲಾಖೆ (ಭಾರಿ ಮತ್ತು ಮಧ್ಯಮ ನೀರಾವರಿ) ಅಡಿಯಲ್ಲಿ ಬರುವ 4 ನಿಗಮಗಳಾದ ಕೃಷ್ಣಾ ಭಾಗ್ಯ ಜಲ ನಿಗಮ, ಕರ್ನಾಟಕ ನೀರಾವರಿ ನಿಗಮ, ಕಾವೇರಿ ನೀರಾವರಿ ನಿಗಮ ಹಾಗೂ ವಿಶ್ವೇಶ್ವರಯ್ಯ ಜಲ ನಿಗಮಗಳಲ್ಲಿ ಬರುವ ಜಲಾಶಯ/ಅಣೆಕಟ್ಟು ಸ್ಥಳಗಳಲ್ಲಿ ಉದ್ಯಾನ/ಉಪವನಗಳ ಅಭಿವೃದ್ಧಿಪಡಿಸಲು ಯೋಜನೆಯನ್ನು ರೂಪಿಸಿಲಾಗಿರುವ ಹಾಗೂ ಇವುಗಳನ್ನು ನಿರ್ಮಿಸಲು ಉದ್ದೇಶಿಸಲಾಗಿರುವ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಆ) | ಇದ್ದಲ್ಲಿ, ರಾಜ್ಯದ ಯಾವ ಯಾವ ನೀರಾವರಿ ಜಲಾಶಯ/ಅಣೆಕಟ್ಟು ಸ್ಥಳಗಳಲ್ಲಿ ಉದ್ಯಾನ/ಉಪವನಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು) | |
| ಇ) | ಈ ಸಂಬಂಧ ಉನ್ನತ ಮಟ್ಟದ ಸಮಿತಿಯನ್ನು ರಚಿಸಲು ಸರ್ಕಾರ ಉದ್ದೇಶಿಸಿದೆಯೇ; ಇದ್ದಲ್ಲಿ, ಈ ಬಗ್ಗೆ ಮಾಹಿತಿ ನೀಡುವುದು; | ಜಲಸಂಪನ್ಮೂಲ ಇಲಾಖೆಯಡಿ ಬರುವ ನಿಗಮಗಳಡಿಯ ವಿವಿಧ ಅಣೆಕಟ್ಟು ಸ್ಥಳಗಳಲ್ಲಿ ಉದ್ಯಾನವನಗಳನ್ನು ರೂಪಿಸಲು ಹಾಗೂ ಅಭಿವೃದ್ಧಿಪಡಿಸುವ ಯೋಜನೆಗಳಿದ್ದು, ಇವುಗಳನ್ನು ಪರಿಶೀಲಿಸಿ ಸೂಕ್ತ ನಿರ್ಣಯ ಕೈಗೊಳ್ಳಲು ಉನ್ನತ ಮಟ್ಟದ ಸಮಿತಿಯನ್ನು ರಚಿಸಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು. |
| ಈ) | ಇದುವರೆವಿಗೂ ಉದ್ಯಾನ/ ಉಪವನಗಳನ್ನು ಯಾವ ಯಾವ ಜಲಾಶಯ/ಅಣೆಕಟ್ಟು ಸ್ಥಳಗಳಲ್ಲಿ ನಿರ್ಮಿಸಲಾಗಿದೆ; ಇವುಗಳ ನಿರ್ವಹಣೆಯ ಜವಾಬ್ದಾರಿ ಯಾರದ್ದು ಹಾಗೂ ಉದ್ಯಾನಗಳ ವಾರ್ಷಿಕ ನಿರ್ವಹಣಾ ವೆಚ್ಚ, ಇಲ್ಲಿಗೆ ಆಗಮಿಸುತ್ತಿರುವ ಪ್ರವಾಸಿಗಳ ಸಂಖ್ಯೆ ಹಾಗೂ ಅವರಿಂದ ಸಂಗ್ರಹಿಸಲಾದ ಶುಲ್ಕದ ಒಟ್ಟು ಮೊತ್ತ ಎಷ್ಟು? (ಉದ್ಯಾನವಾರು ಮಾಹಿತಿ ನೀಡುವುದು) | ಜಲಸಂಪನ್ಮೂಲ ಇಲಾಖೆ (ಭಾರಿ ಮತ್ತು ಮಧ್ಯಮ ನೀರಾವರಿ) ಅಡಿಯಲ್ಲಿ ಬರುವ 4 ನಿಗಮಗಳಲ್ಲಿ ನೀರಾವರಿ ಜಲಾಶಯ/ ಅಣೆಕಟ್ಟು ಸ್ಥಳಗಳಲ್ಲಿ ಉದ್ಯಾನ/ಉಪವನಗಳ ನಿರ್ವಹಣೆಯ ಜವಾಬ್ದಾರಿ ಹಾಗೂ ಉದ್ಯಾನಗಳ ವಾರ್ಷಿಕ ನಿರ್ವಹಣಾ ವೆಚ್ಚ, ಪ್ರವಾಸಿಗಳ ಸಂಖ್ಯೆ ಹಾಗೂ ಅವರಿಂದ ಸಂಗ್ರಹಿಸಲಾದ ಶುಲ್ಕದ ಒಟ್ಟು ಮೊತ್ತ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |

**ಸಂಖ್ಯೆ: ಜಸಂಇ 15 ಎಂಎಲ್ಎ 2025**

**(ಡಿ.ಕೆ.ಶಿವಕುಮಾರ್)**

**ಮಾನ್ಯ ಉಪ ಮುಖ್ಯ ಮಂತ್ರಿಗಳು**

**ಅನುಬಂಧ-1**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು.ಜಿ.ಮಾದೇಗೌಡ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:219(210)ಕ್ಕೆ ಉತ್ತರ**

ವಿಷಯ:ರಾಜ್ಯದ ನೀರಾವರಿ ಜಲಾಶಯ/ಅಣೆಕಟ್ಟು ಸ್ಥಳಗಳಲ್ಲಿ ಉದ್ಯಾನ ಅಭಿವೃದ್ಧಿಪಡಿಸುವ ಕುರಿತು.

ಜಲಸಂಪನ್ಮೂಲ ಇಲಾಖೆ(ಭಾರಿ ಮತ್ತು ಮಧ್ಯಮ ನೀರಾವರಿ) ಅಡಿಯಲ್ಲಿ ಬರುವ 4 ನಿಗಮಗಳಾದ ಕೃಷ್ಣಾ ಭಾಗ್ಯ ಜಲ ನಿಗಮ, ಕರ್ನಾಟಕ ನೀರಾವರಿ ನಿಗಮ, ಕಾವೇರಿ ನೀರಾವರಿ ನಿಗಮ ಹಾಗೂ ವಿಶ್ವೇಶ್ವರಯ್ಯ ಜಲ ನಿಗಮಗಳಲ್ಲಿ ನೀರಾವರಿ ಜಲಾಶಯ/ಅಣೆಕಟ್ಟು ಸ್ಥಳಗಳಲ್ಲಿ ಉದ್ಯಾನ/ಉಪವನಗಳ ನಿರ್ಮಿಸಲು ಉದ್ದೇಶಿಸಲಾಗಿರುವ ನಿಗಮವಾರು ವಿವರಗಳು ಈ ಕೆಳಗಿನಂತಿವೆ:

**<u>ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ:</u>**

ಕೃಷ್ಣಾ ಭಾಗ್ಯ ಜಲ ನಿಗಮದಿಂದ ಕೃಷ್ಣಾ ನದಿಗೆ ಅಡ್ಡಲಾಗಿ ಆಲಮಟ್ಟಿ ಜಲಾಶಯದಲ್ಲಿ ನೀರಿನ ಶೇಖರಣೆ ಮಾಡಿ ನಾರಾಯಣಪೂರ ಜಲಾಶಯದ ಮೂಲಕ ನೀರಾವರಿಗಾಗಿ, ಕುಡಿಯುವ ನೀರಿಗಾಗಿ ಹಾಗೂ ಕೈಗಾರಿಕೆಗಳಿಗಾಗಿ, ವಿದ್ಯುತ್ ಉತ್ಪಾದನೆಗಾಗಿ ನೀರನ್ನು ಒದಗಿಸುವ ಉದ್ದೇಶದಿಂದ ಅಣೆಕಟ್ಟುಗಳನ್ನು ನಿರ್ಮಿಸಲಾಗಿರುತ್ತದೆ.

- **ಆಲಮಟ್ಟಿ ಅಣೆಕಟ್ಟು:** ಆಲಮಟ್ಟಿ ಜಲಾಶಯದ ಕೆಳಭಾಗದಲ್ಲಿ ಮನರಂಜನಾ ಉದ್ಯಾನವನಗಳನ್ನು ನಿರ್ಮಿಸಲಾಗಿರುತ್ತದೆ. ಸದರಿ ಉದ್ಯಾನವನಗಳನ್ನು ವೀಕ್ಷಣೆ ಮಾಡಲು ಪ್ರತಿ ವರ್ಷ ಅಂದಾಜು 15 ಲಕ್ಷ ಪ್ರವಾಸಿಗರನ್ನು ಆಕರ್ಷಿಸುತ್ತಿದ್ದು, ಉತ್ತರ ಕರ್ನಾಟಕದಲ್ಲಿಯೇ ಪ್ರಮುಖ ಪ್ರವಾಸಿ ತಾಣವಾಗಿರುತ್ತದೆ. ಆಲಮಟ್ಟಿ ಜಲಾಶಯದ ಎಡ ಭಾಗದಲ್ಲಿ ರಾಕ್ ಉದ್ಯಾನವನ ಹಾಗೂ 77 ಎಕರೆಯಡಿ ಉದ್ಯಾನವನ ಈ ಎರಡು ಪ್ರಮುಖ ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸಲಾಗಿರುತ್ತದೆ. ಬಲ ಭಾಗದಲ್ಲಿ ಲವಕುಶ ಉದ್ಯಾನವನ ಹಾಗೂ ಕೃಷ್ಣ ಉದ್ಯಾನವನ ಎಂಬ ಎರಡು ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸಲಾಗಿರುತ್ತದೆ ಹಾಗೂ ಆಲಮಟ್ಟಿ ಆಣೆಕಟ್ಟು ಪ್ರದೇಶವು ರಾಷ್ಟ್ರೀಯ ಮಟ್ಟದಲ್ಲಿ ಪ್ರವಾಸಿ ತಾಣವಾಗಿ ಅಭಿವೃದ್ಧಿ ಹೊಂದಲು ಯೋಗ್ಯ ಪ್ರದೇಶವಾಗಿರುತ್ತದೆ.
- **ನಾರಾಯಣಪುರ ಅಣೆಕಟ್ಟು:** ಕೇಂದ್ರ ಸರ್ಕಾರದ ಸಹಾಯಧನದಡಿ ಡ್ರಿಪ್ ಹಂತ-2ರಡಿ ನಾರಾಯಣಪುರ ಅಣೆಕಟ್ಟು ಉದ್ಯಾನವನ ನಿರ್ಮಿಸುವ ಕಾಮಗಾರಿಯ ಪ್ರಸ್ತಾವನೆಯನ್ನು ತಯಾರಿಸಲು ಸಮಾಲೋಚಕರನ್ನು ಈಗಾಗಲೇ ನೇಮಿಸಲಾಗಿದ್ದು, ಸದರಿಯವರಿಂದ ಪ್ರಸ್ತಾವನೆಯನ್ನು ಪಡೆದು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯಲು ಕ್ರಮವಹಿಸಲಾಗುತ್ತಿದೆ.

**<u>ಕರ್ನಾಟಕ ನೀರಾವರಿ ನಿಗಮ ನಿಯಮಿತ:</u>**

- **ಹಿಡಕಲ್ ಜಲಾಶಯ**: ಬೆಳಗಾವಿ ಜಿಲ್ಲೆಯ ಹತ್ತಿರ ರಾಜಾ ಲಖಮಗೌಡ ಉದ್ಯಾನ ಕಾಶಿ ಅಭಿವೃದ್ಧಿ ಯೋಜನೆಯ ರೂ.147.14 ಕೋಟಿಗಳ ವಿವರವಾದ ಯೋಜನಾ ವರದಿಗೆ ಸರ್ಕಾರದ ಆದೇಶಸಂ: ಜಸಂಇ 103 ಎನ್‌ಐಎನ್ 2021, ದಿನಾಂಕ:07.03.2022ರಡಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಅದರಲ್ಲಿ ಹಂತ-1ರಲ್ಲಿ ರೂ.93.85 ಕೋಟಿಗಳ ಮೊತ್ತದ ಟೆಂಡರನ್ನು 2022-23ನೇ ಸಾಲಿನ ಮೊದಲನೇ ತ್ರೈಮಾಸಿಕದಲ್ಲಿ ಮತ್ತು ಹಂತ-2ರ ರೂ.51.07 ಕೋಟಿ ಮೊತ್ತದ ಕಾಮಗಾರಿಯ ಟೆಂಡರ್‌ನ್ನು ಹಂತ-1ರ ಕಾಮಗಾರಿಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸಿದ ನಂತರ ಕೈಗೆತ್ತಿಕೊಳ್ಳುವ ಷರತ್ತಿಗೊಳಪಟ್ಟು ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಮುಂದುವರೆದು, ಸದರಿ ಯೋಜನೆಯ ಕಾಮಗಾರಿಗಳನ್ನು ಪ್ಯಾಕೇಜವಾರು ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಅದರಂತೆ ಹಂತ-1ರ

ಮೊದಲನೇ ಪ್ಯಾಕೇಜ್‌ನ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಹಾಗೂ ಹಂತ-1ರ ಎರಡನೇ ಪ್ಯಾಕೇಜ್ನ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

- **ತುಂಗಭದ್ರಾ ಜಲಾಶಯ**: ತುಂಗ ಭದ್ರಾ ಅಣೆಕಟ್ಟಿನ ಕೆಳಭಾಗದಲ್ಲಿ ಈಗಾಗಲೇ ಉದ್ಯಾನವನವನ್ನು ನಿರ್ಮಿಸಲಾಗಿದ್ದು, ಎಡಭಾಗದ ಉದ್ಯಾನವನದ ನಿರ್ವಹಣೆಯನ್ನು ತೋಟಗಾರಿಕೆ ಇಲಾಖೆ ಹಾಗೂ ಬಲಭಾಗದ ನಿರ್ವಹಣೆಯನ್ನು ತುಂಗಭದ್ರಾ ಮಂಡಳಿಯು ನಿರ್ವಹಿಸುತ್ತಿರುತ್ತದೆ.
- **ಮುಲ್ಲಾಮಾರಿ ಮೇಲ್ದಂಡೆ ಯೋಜನೆ:** ಬೀದರ ಜಿಲ್ಲೆಯ ಬಸವ ಕಲ್ಯಾಣ ತಾಲೂಕಿನ ಖೇರ್ಡಾ(ಬಿ) ಗ್ರಾಮದಲ್ಲಿರುವ ಮುಲ್ಲಾಮಾರಿ ಮೇಲ್ದಂಡೆ ಅಣೆಕಟ್ಟು ಕೆಳಭಾಗದಲ್ಲಿ ಸುಮಾರು 60 ಎಕರೆ ಪ್ರದೇಶದಲ್ಲಿ ಉದ್ಯಾನವನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ವಿವರವಾದ ಯೋಜನಾ ವರದಿಯನ್ನು ರೂ.28.80ಕೋಟಿಗಳಿಗೆ ತಯಾರಿಸಲಾಗಿದ್ದು, ಪರಿಶೀಲನಾ ಹಂತದಲ್ಲಿರುತ್ತದೆ.
- **ಕಾರಂಜಾ ಯೋಜನೆ:** ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಬ್ಯಾಲಹಳ್ಳಿ ಗ್ರಾಮದ ಹತ್ತಿರವಿರುವ ಕಾರಂಜಾ ಅಣೆಕಟ್ಟನ್ನು ಉನ್ನತ ದರ್ಜೆಯ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು ಯೋಜನಾ ವರದಿಯನ್ನು ತಯಾರಿಸಲು ನುರಿತ ಸಲಹೆಗಾರರಿಂದ/ ಸಮಾಲೋಚಕರಿಂದ ಟೆಂಡರ್ ಆಹ್ವಾನಿಸಿದ್ದು, ಸದರಿ ಸಮಾಲೋಚಕರು ಕಾರಂಜಾ ಅಣೆಕಟ್ಟಿನಲ್ಲಿ ಖಾಲಿ ಇರುವ ಪ್ರದೇಶದಲ್ಲಿ ಉದ್ಯಾನವನ ನಿರ್ಮಿಸುವ ಯೋಜನೆಯ ರೂ: 110.00 ಕೋಟಿಯ ಮೊತ್ತದ ಪರಿಕಲ್ಪನೆಯ (Concept) ವರದಿಯನ್ನು ಸಲ್ಲಿಸಿರುತ್ತಾರೆ. Phase-I ಕಾಮಗಾರಿಯ ಪರಿಷ್ಕೃತ ಎಸ್.ಆರ್. ದರಪಟ್ಟಿ 2022ರ ದರವನ್ನು ಅಳವಡಿಸಿ, ಪರಿಷ್ಕೃತ ವಿವರವಾದ ಅಂದಾಜು ಪಟ್ಟಿಯನ್ನು ರೂ.33.21ಕೋಟಿಗಳಿಗೆ ತಯಾರಿಸಲಾಗಿದ್ದು, ಪರಿಶೀಲನಾ ಹಂತದಲ್ಲಿರುತ್ತದೆ.
- **ಚುಳಕಿ ನಾಲಾ ಯೋಜನೆ:** ಬೀದರ ಜಿಲ್ಲೆಯ ಬಸವ ಕಲ್ಯಾಣ ತಾಲ್ಲೂಕಿನ ಮುಸ್ತಾಪೂರ ಗ್ರಾಮದ ಹತ್ತಿರವಿರುವ ಚುಳಕಿ ನಾಲಾ ಅಣೆಕಟ್ಟನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸಲು ಯೋಜನಾ ವರದಿಯನ್ನು ತಯಾರಿಸಲು ನುರಿತ ಸಲಹೆಗಾರರಿಂದ/ ಸಮಾಲೋಚಕರಿಂದ ಟೆಂಡರ್ ಆಹ್ವಾನಿಸಿದ್ದು, ಅದರಂತೆ ವಿಸ್ತೃತ ಯೋಜನಾ ವರದಿಯು ತಯಾರಿಕಾ ಹಂತದಲ್ಲಿರುತ್ತದೆ.
- **ನಾರಿ ಹಳ್ಳ ಯೋಜನೆ:** ನಾರಿಹಳ್ಳ ಅಣೆಕಟ್ಟಿನ ಕೆಳಭಾಗದಲ್ಲಿ ಉದ್ಯಾನವನನ್ನು ನಿರ್ಮಿಸುವ ಕಾಮಗಾರಿಯನ್ನು ರೂ.250.00ಲಕ್ಷಗಳಿಗೆ ದಿನಾಂಕ:27.06.2024ರಂದು ಗುತ್ತಿಗೆ ವಹಿಸಲಾಗಿದ್ದು, ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು 11ತಿಂಗಳು ಸಮಯಾವಾಕಾಶವನ್ನು ನಿಗಧಿಪಡಿಸಲಾಗಿರುತ್ತದೆ. ಪ್ರಸ್ತುತ ಸದರಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
- **ಮಸ್ಕಿ ನಾಲಾ ಯೋಜನೆ:** ಮಸ್ಕಿ ನಾಲಾ ಯೋಜನೆಯಡಿ ಉದ್ಯಾನವನವನ್ನು ವಿಶ್ವ ಬ್ಯಾಂಕ್ ಬಾಹ್ಯ ನೆರವಿನ ಡ್ರಿಪ್-II ಯೋಜನೆಯಡಿ ನಿರ್ಮಿಸಲು ಉದ್ದೇಶಿಸಲಾಗಿದ್ದು, ಸದರಿ ಕಾಮಗಾರಿಯ ಪರಿಷ್ಕೃತ ತಾಂತ್ರಿಕ ಟಿಪ್ಪಣಿಯನ್ನು ದಿನಾಂಕ:18.05.2024ರಲ್ಲಿ ಮುಖ್ಯ ಅಭಿಯಂತರರರು, ಹಾಗೂ ನೋಡಲ್ ಅಧಿಕಾರಿ, SPMU-DRIP ಬೆಂಗಳೂರು ಇವರಿಗೆ ಅನುಮೋದನೆ ಪಡೆಯಲು ಕ್ರಮವಹಿಸಲಾಗುತ್ತಿದೆ.

**<u>ಕಾವೇರಿ ನೀರಾವರಿ ನಿಗಮ ನಿಯಮಿತ:</u>**

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಕೃಷ್ಣರಾಜಸಾಗರದಲ್ಲಿ ಪ್ರಸ್ತುತ ಬೃಂದಾವನ ಉದ್ಯಾನವನವಿದ್ದು, ಪಿಪಿಪಿ ಮಾದರಿಯಲ್ಲಿ ಸದರಿ ಬೃಂದಾವನ ಉದ್ಯಾನವನವನ್ನು ಮೇಲ್ದರ್ಜೆಗೇರಿಸುವ ಯೋಜನೆಯನ್ನು ರೂಪಿಸಲಾಗಿದೆ. ಸದರಿ ಯೋಜನೆಗೆ ಸರ್ಕಾರಿ ಆದೇಶ ಸಂಖ್ಯೆ: ಜಸಂಇ 128 ಎಂಎಂಕೆ 2021 (ಭಾಗ-1) ಬೆಂಗಳೂರು, ದಿನಾಂಕ:30.07.2024 ರಂದು ರೂ.2663.74 ಕೋಟಿಗಳಿಗೆ ಅನುಮೋದನೆ ದೊರೆತ್ತಿರುತ್ತದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

- ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಂಚನಬೆಲೆ ಮತ್ತು ಹಾಸನ ಜಿಲ್ಲೆ, ಹಾಸನ ತಾಲ್ಲೂಕಿನ ಹೇಮಾವತಿ ಜಲಾಶಯಗಳಲ್ಲಿ ಪಿಪಿಪಿ ಮಾದರಿಯಲ್ಲಿ ಉದ್ಯಾನವನವನ್ನು ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ.

- ಮಂಚನಬೆಲೆ ಜಲಾಶಯದ ಉದ್ಯಾನವನ ಅಭಿವೃದ್ಧಿ ಕಾಮಗಾರಿಯನ್ನು ಅಂದಾಜು ಮೊತ್ತ ರೂ.144.69 ಕೋಟಿಗಳಲ್ಲಿ ಪಿಪಿಪಿ ಮಾದರಿಯಲ್ಲಿ ಕೈಗೊಳ್ಳಲು ಟೆಂಡರ್ ಪ್ರಕ್ರಿಯೆಯ ತಾಂತ್ರಿಕ ಬಿಡ್ ಮೌಲ್ಯ ಮಾಪನಾ ಹಂತದಲ್ಲಿರುತ್ತದೆ.
- ಹೇಮಾವತಿ ಜಲಾಶಯ ಉದ್ಯಾನವನ ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಸಕ್ಷಮ ಪ್ರಾಧಿಕಾರಿಗಳ ಅನುಮೋದನೆ ಪಡೆಯಲು ಕ್ರಮ ವಹಿಸಲಾಗುತ್ತಿದೆ.
- ಹಾರಂಗಿ ಜಲಾಶಯದಡಿಯಲ್ಲಿ ಉದ್ಯಾನವನವನ್ನು ನಿರ್ಮಿಸಲಾಗಿದೆ. ಸದರಿ ಉದ್ಯಾನವನದ ಉನ್ನತೀಕರಣ ಪ್ರಸ್ತಾವನೆ ಇರುವುದಿಲ್ಲ.

**ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ:**

- ವಿ.ವಿ.ಸಾಗರ ಜಲಾಶಯದ ಹತ್ತಿರ DRIP-II ಯೋಜನೆ ಅಡಿಯಲ್ಲಿ ಉದ್ಯಾನ/ಉಪವನಗಳ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ Project Screening Template(PST) of VVS dam under DRIP-IIಯೋಜನೆ ಅಡಿಯಲ್ಲಿ ಉದ್ಯಾನ/ಉಪವನಗಳನ್ನು ನಿರ್ಮಿಸಲು ಅನುದಾನದ ಪ್ರಾವಿಧಾನ ಮಾಡಿಕೊಳ್ಳಲಾಗಿದ್ದು, ಸದರಿ PSTಯ ಅನುಮೋದನೆ ಪಡೆಯಲು ಕಾಮಗಾರಿಯ Master plan ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಲು M/s Bucket Consultant, Pune ಇವರಿಗೆ ಗುತ್ತಿಗೆ ವಹಿಸಲಾಗಿರುತ್ತದೆ. ಕರಡು Master plan ತಯಾರಿಕಾ ಹಂತದಲ್ಲಿದ್ದು, Master planಗೆ ಅನುಗುಣವಾಗಿ ಅಂದಾಜು ಪಟ್ಟಿಯನ್ನು ತಯಾರಿಸಿ PSTಯಲ್ಲಿ ಅಳವಡಿಸಿಕೊಂಡು ಅನುಮೋದನೆ ಪಡೆಯಲು ಕ್ರಮ ವಹಿಸಲಾಗಿದೆ.

******

## ಅನುಬಂಧ-2

## ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಮಧು.ಜಿ.ಮಾದೇಗೌಡ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:219(210)ಕ್ಕೆ ಉತ್ತರ

ವಿಷಯ:ರಾಜ್ಯದ ನೀರಾವರಿ ಜಲಾಶಯ/ಅಣೆಕಟ್ಟು ಸ್ಥಳಗಳಲ್ಲಿ ಉದ್ಯಾನ ಅಭಿವೃದ್ಧಿಪಡಿಸುವ ಕುರಿತು.

ಜಲಸಂಪನ್ಮೂಲ ಇಲಾಖೆ(ಭಾರಿ ಮತ್ತು ಮಧ್ಯಮ ನೀರಾವರಿ) ಅಡಿಯಲ್ಲಿ ಬರುವ 4 ನಿಗಮಗಳಲ್ಲಿ ನೀರಾವರಿ ಜಲಾಶಯ/ ಅಣೆಕಟ್ಟು ಸ್ಥಳಗಳಲ್ಲಿ ಉದ್ಯಾನ/ಉಪವನಗಳ ನಿರ್ವಹಣೆಯ ಜವಾಬ್ದಾರಿ ಹಾಗೂ ಉದ್ಯಾನಗಳ ವಾರ್ಷಿಕ ನಿರ್ವಹಣಾ ವೆಚ್ಚ, ಪ್ರವಾಸಿಗಳ ಸಂಖ್ಯೆ ಹಾಗೂ ಅವರಿಂದ ಸಂಗ್ರಹಿಸಲಾದ ಶುಲ್ಕದ ಒಟ್ಟು ಮೊತ್ತದ ನಿಗಮವಾರು ವಿವರಗಳು ಈ ಕೆಳಗಿನಂತಿವೆ:

**<u>ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ:</u>**

ಆಲಮಟ್ಟಿ ಆಣೆಕಟ್ಟು ಯೋಜನಾ ಪ್ರದೇಶದಲ್ಲಿ ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಇವುಗಳ ನಿರ್ವಹಣೆಯ ಜವಾಬ್ದಾರಿಯನ್ನು ನಿಗಮದ ಆಣೆಕಟ್ಟು ವಿಭಾಗ, ಆಲಮಟ್ಟಿ ಹಾಗೂ ನಿಗಮದ ಅರಣ್ಯ ವಿಭಾಗ ಆಲಮಟ್ಟಿ ರವರು ನಿರ್ವಹಿಸುತ್ತಿದ್ದಾರೆ.

| ಕ್ರ ಸಂ. | ಉದ್ಯಾನವನಗಳ ಹೆಸರು | ಉದ್ಯಾನವನ ಪ್ರಾರಂಭಗೊಂಡ ವರ್ಷ | 2024–25 ನೇ ಸಾಲಿನ ವಾರ್ಷಿಕ ನಿರ್ವಹಣಾ ವೆಚ್ಚ (ರೂ.ಕೋಟಿಗಳಲ್ಲಿ) | ಪ್ರಸಕ್ತ ಸಾಲಿನಲ್ಲಿ ಆಗಮಿಸಿರುವ ಪ್ರವಾಸಿಗರ ಸಂಖ್ಯೆ ಲಕ್ಷಗಳಲ್ಲಿ | ಪ್ರಸಕ್ತ ಸಾಲಿನಲ್ಲಿ ಪ್ರವಾಸಿಗರಿಂದ ಸಂಗ್ರಹಿಸಲಾದ ಶುಲ್ಕ (ರೂ.ಕೋಟಿಗಳಲ್ಲಿ) |
|---|---|---|---|---|---|
| (ಅ) | **ಆಲಮಟ್ಟಿ ಅಣೆಕಟ್ಟು** | | | | |
| 1 | ಸಾಂಪ್ರದಾಯಿಕ ಉದ್ಯಾನವನಗಳ ಸಂಕೀರ್ಣ (ಆಲಮಟ್ಟಿ ಆಣೆಕಟ್ಟು ನಂದನವನ) (ಮೋಘಲ್, ಫ್ರೇಂಚ್, ಇಟಾಲಿಯನ್, ರೋಸ್ ಎಂ.ಡಿ.ಎಫ್, ಟೋಪಿಎರಿ ಇತ್ಯಾದಿ) (ಕ್ಷೇತ್ರ–79.22 ಎಕರೆ). | 2009–10 | 2.20 | 5.18 | 2.34 |
| 2 | ರಾಕ್ ಉದ್ಯಾನವನ (ಕ್ಷೇತ್ರ–35.27 ಎಕರೆ). | 2003–04 | 1.42 | 3.77 | 0.66 |
| 3 | ಬಸವ ಉದ್ಯಾನವನ, ನಿಡಗುಂದಿ (ಕ್ಷೇತ್ರ–13.00 ಎಕರೆ) | 2022–23 | 1.33 | ಪ್ರವಾಸಿಗರಿಂದ ಯಾವುದೇ ಶುಲ್ಕ ಇರುವುದಿಲ್ಲ. | |
| 4 | ಕೃಷ್ಣಾ ಉದ್ಯಾನವನ (ಕ್ಷೇತ್ರ–2.16 ಎಕರೆ) | 2003–04 | 0.80 | 0.48 | 0.09 |
| 5 | ಲವ–ಕುಶ ಉದ್ಯಾನವನ (ಕ್ಷೇತ್ರ–5.30 ಎಕರೆ) | 2009–10 | | 0.43 | 0.08 |
| 6 | ಸೀತಾವನ ಉದ್ಯಾನವನ (ಕ್ಷೇತ್ರ–23.39 ಎಕರೆ) | -- | -- | ಕಾಮಗಾರಿ ಪ್ರಗತಿಯ ಹಂತದಲ್ಲಿರುತ್ತದೆ. | |
| | **ಒಟ್ಟು (158.34 ಎಕರೆ)** | -- | **5.75** | **9.86** | **3.17** |
| (ಆ) | **ನಾರಾಯಣಪುರ ಅಣೆಕಟ್ಟು** | ಕೇಂದ್ರ ಸರ್ಕಾರದ ಸಹಾಯಧನದಡಿ ಡ್ರಿಪ್ ಹಂತ–2ರಡಿ ನಾರಾಯಣಪುರ ಅಣೆಕಟ್ಟು ಉದ್ಯಾನವನ ನಿರ್ಮಿಸುವ ಕಾಮಗಾರಿಯ ಪ್ರಸ್ತಾವನೆಯನ್ನು ತಯಾರಿಸಲು ಸಮಾಲೋಚಕರನ್ನು ಈಗಾಗಲೇ ನೇಮಿಸಲಾಗಿದ್ದು, ಸದರಿಯವರಿಂದ ಪ್ರಸ್ತಾವನೆಯನ್ನು ಪಡೆದು ಸಕ್ಷಮ ಪ್ರಾಧೀಕಾರದ ಅನುಮೋದನೆಗೆ ಸಲ್ಲಿಸಲಾಗುವುದು. | | | |

## <u>ಕರ್ನಾಟಕ ನೀರಾವರಿ ನಿಗಮ ನಿಯಮಿತ:</u>

- ಬೆಳಗಾವಿ ಜಿಲ್ಲೆಯ ಹಿಡಕಲ್ ಜಲಾಶಯದ ಹತ್ತಿರರಾಜಾಲಖಮಗೌಡ ಉದ್ಯಾನ ಕಾಶಿ ಅಭಿವೃದ್ದಿ ಯೋಜನೆ: ಸದರಿ ಯೋಜನೆಯ ಕಾಮಗಾರಿಯನ್ನು ಮೂರು (03) ಹಂತಗಳಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ. ಅದರಲ್ಲಿ ಹಂತ-1 ಮತ್ತು ಹಂತ-2ರ ಕಾಮಗಾರಿಗಳ ಅನುಷ್ಠಾನ ಹಾಗೂ ನಿರ್ವಹಣೆಯನ್ನು ಕರ್ನಾಟಕ ನೀರಾವರಿ ನಿಗಮದ ವತಿಯಿಂದ ಕೈಗೊಳ್ಳಲು ಉದ್ದೇಶಿಸಲಾಗಿದೆ ಹಾಗೂ ಹಂತ-3ರ ಕಾಮಗಾರಿಯನ್ನು ಪಿಪಿಪಿ (PPP-Public Private Partnership) ಮೂಲಕ ಕೈಗೊಳ್ಳಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ಕಾಮಗಾರಿಗಳನ್ನು ಪ್ಯಾಕೇಜವಾರು ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಅದರಂತೆ ಹಂತ-1ರ ಮೊದಲನೇ ಪ್ಯಾಕೇಜ್‌ನ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಹಾಗೂ ಹಂತ-1ರ ಎರಡನೇ ಪ್ಯಾಕೇಜ್‌ನ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

- ತುಂಗ ಭದ್ರಾ ಅಣೆಕಟ್ಟಿನ ಕೆಳಭಾಗದಲ್ಲಿ ಈಗಾಗಲೇ ಉದ್ಯಾನವನವನ್ನು ನಿರ್ಮಿಸಲಾಗಿದ್ದು, ಎಡಭಾಗದ ಉದ್ಯಾನವನದ ನಿರ್ವಹಣೆಯನ್ನು ತೋಟಗಾರಿಕೆ ಇಲಾಖೆ ಹಾಗೂ ಬಲಭಾಗದ ನಿರ್ವಹಣೆಯನ್ನು ತುಂಗಭದ್ರಾ ಮಂಡಳಿಯು ನಿರ್ವಹಿಸುತ್ತಿರುತ್ತದೆ.

## <u>ಕಾವೇರಿ ನೀರಾವರಿ ನಿಗಮ ನಿಯಮಿತ:</u>

- **ಕೃಷ್ಣರಾಜಸಾಗರದ ಬೃಂದಾವನ ಉದ್ಯಾನವನ**

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಕೃಷ್ಣರಾಜಸಾಗರದ ಬೃಂದಾವನ ಉದ್ಯಾನವನವು ಉತ್ತರ ಬೃಂದಾವನ – 8.00 ಎಕರೆ ಹಾಗೂ ದಕ್ಷಿಣ ಬೃಂದಾವನ – 12.00 ಎಕರೆ ವಿಸ್ತೀರ್ಣಗಳಿದ್ದು, ಸಿವಿಲ್ ಕಾಮಗಾರಿಗೆ ಸಂಬಂಧಿಸಿದAತೆ ಜಲಸಂಪನ್ಮೂಲ ಇಲಾಖೆ, ಕಾವೇರಿ ನೀರಾವರಿ ನಿಗಮ ನಿರ್ವಹಿಸುತ್ತಿದ್ದು, ಹುಲ್ಲುಹಾಸು ಹಾಗೂ ಗಿಡಗಳನ್ನು ತೋಟಗಾರಿಕೆ ಇಲಾಖೆಯು ನಿರ್ವಹಿಸುತ್ತಿರುತ್ತದೆ.

**ವಾರ್ಷಿಕ ನಿರ್ವಹಣಾ ವೆಚ್ಚ**

2021-22 ನೇ ಸಾಲಿನಲ್ಲಿ ರೂ.2,75,00,00/-
2022-23 ನೇ ಸಾಲಿನಲ್ಲಿ ರೂ.3,05,00,000/-
2023-24 ನೇ ಸಾಲಿನಲ್ಲಿ ರೂ.3,66,43,000/-

**ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಕೃಷ್ಣರಾಜಸಾಗರದ ಬೃಂದಾವನ ಉದ್ಯಾನವನಕ್ಕೆ ಆಗಮಿಸುವ ಪ್ರವಾಸಿಗರ ವಿವರ**.

| | 2022 | 2023 | 2024 |
|---|---|---|---|
| ಪ್ರವಾಸಿಗರ ಸಂಖ್ಯೆ | 92,331 | 8,81,305 | 7,85,708 |
| ಮಕ್ಕಳ ಸಂಖ್ಯೆ | 2,96,374 | 4,11,604 | 8,00,537 |
| ಶಾಲಾ ಮಕ್ಕಳ ಸಂಖ್ಯೆ | 35,163 | 254037.00 | 184951.00 |
| ಸಂಗ್ರಹಿಸಲಾದ ಪ್ರವೇಶ ಶುಲ್ಕದ ಮೊತ್ತ ರೂ. | 4,97,71,425/- | 5,06,14,560/- | 4,90,44,590/- |
| ಸಂಗ್ರಹಿಸಲಾದ ಪಾರ್ಕಿಂಗ್ ಶುಲ್ಕದ ಮೊತ್ತ ರೂ. | 86,43,940/- | 79,42,990/- | 73,63,000/- |

➢ **ಹಾರಂಗಿ ಜಲಾಶಯದ ಉದ್ಯಾನವನ**

ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಹಾರಂಗಿ ಜಲಾಶಯಕ್ಕೆ ಸಂಬಂಧಿಸಿದಂತೆ ಹಾರಂಗಿ ಅಣೆಕಟ್ಟೆಯ ಕೆಳಭಾಗದಲ್ಲಿ 33 ಎಕರೆ ಪ್ರದೇಶ ವ್ಯಾಪ್ತಿಯಲ್ಲಿ ಉದ್ಯಾನವನ್ನು ನಿರ್ಮಿಸಿದ್ದು, ಸಾರ್ವಜನಿಕರ ವೀಕ್ಷಣೆಗೆ ನೀಡಲಾಗಿರುತ್ತದೆ.

**ವಾರ್ಷಿಕ ನಿರ್ವಹಣಾ ವೆಚ್ಚ** .

2021-22 ನೇ ಸಾಲಿನಲ್ಲಿ ರೂ. 1,46,51,240/-
2022-23 ನೇ ಸಾಲಿನಲ್ಲಿ ರೂ. 79,81,210 /-
2023-24 ನೇ ಸಾಲಿನಲ್ಲಿ ರೂ. 70,33,499 /-

**ಕೊಡಗು ಜಿಲ್ಲೆ ಕುಶಾಲನಗರ ತಾಲ್ಲೂಕು ಹಾರಂಗಿ ಉದ್ಯಾನವನಕ್ಕೆ ಆಗಮಿಸುವ ಪ್ರವಾಸಿಗರ ವಿವರ**.

| | **2022** | **2023** | **2024** |
|---|---|---|---|
| ಪ್ರವಾಸಿಗರ ಸಂಖ್ಯೆ | 1,48,357 | 2,48,305 | 3,23,617 |
| ಮಕ್ಕಳ ಸಂಖ್ಯೆ | 5,844 | 25,227 | 35,582 |
| ಸಂಗ್ರಹಿಸಲಾದ ಪ್ರವೇಶ ಶುಲ್ಕದ ಮೊತ್ತ ರೂ. | 15,12,790/- | 26,09,185/- | 34,14,080/- |
| ಸಂಗ್ರಹಿಸಲಾದ ಪಾರ್ಕಿಂಗ್ ಶುಲ್ಕದ ಮೊತ್ತ ರೂ. | 4,97,650/- | 6,70,705/- | 9,44,430/- |

**ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ:**

➢ ಪ್ರಸ್ತುತ, ವಿ.ವಿ.ಸಾಗರ ಜಲಾಶಯದ ಹತ್ತಿರ DRIP-II ಯೋಜನೆ ಅಡಿಯಲ್ಲಿಉದ್ಯಾನ/ಉಪವನಗಳ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದ್ದು, ಯೋಜನೆಯ ಅನುಷ್ಠಾನದ ನಂತರ ಸಮರ್ಪಕ ನಿರ್ವಹಣೆಯನ್ನು ನಿಗಮದ ವತಿಯಿಂದ ಕೈಗೊಳ್ಳಲಾಗುವುದು.

*****